ಈ ಮಂಗಳಕಾರ್ಯಕ್ಕೆಂದೇ ಜತನದಿಂದ ಕಾಪಿಟ್ಟುಕೊಂಡಿದ್ದ ಹಣವನ್ನು ನಕುಲ ನಿರ್ವಂಚನೆಯಿಂದ ಖರ್ಚು ಮಾಡಿ ಅಕ್ಕನ ಋಣದಲ್ಲಿ ಒಂದಲ್ಪ ತೀರಿಸಿದ ಸಮಾಧಾನ ಕಂಡುಕೊಂಡ. ಹುಟ್ಟಿದ ಮನೆಯಲ್ಲಿ, ಹೊಕ್ಕ ಮನೆಯಲ್ಲಿ, ಎರಡೂ ಕಡೆ ಬಡತನದ ಬೇಗೆ ಅನುಭವಿಸಿ ಬಸವಳಿದಿದ್ದ ಅಕ್ಕನನ್ನು ಇನ್ನಾದರೂ ಉಯ್ಯಾಲೆಮಣೆಯಲ್ಲಿ ಕೂರಿಸಿ ತೂಗಬೇಕು ಎನ್ನುವ ನಕುಲನ ಆಸೆ ಈಡೇರಲು ದೇವರು ಕೃಪೆ ತೋರಿಸಲಿಲ್ಲ. ತನ್ನ ತೆಕ್ಕೆಗೆ ಬಿದ್ದ ಮಕ್ಕಳಿಬ್ಬರನ್ನು ಬೆಳೆಸಿ ಒಂದು ನೆಲೆಗೆ ತಲುಪಿಸುವುದರಲ್ಲಿ ಅವಳ ಜೀವ ಸೋತು ಹೈರಾಣಾಗಿತ್ತು ಎನ್ನುವಂತೆ ಹೇಳದೆ, ಕೇಳದೆ, ಸುಳಿವು–ಸೂಚನೆಯಿಲ್ಲದೆ, ಒಂದು ದಿನ ಪೆಟ್ಟಿಗೆ ಕಟ್ಟಿದಳು ನರ್ಮದಕ್ಕ. ನೆಪಕ್ಕೆ ಎರಡು ದಿನದ ಜ್ವರ. ಯಾವ ಮಾರಣಾಂತಿಕ ಜ್ವರವೋ ಎಂದು ನಂತರ ಅನಿಸಿತ್ತು ನಕುಲನಿಗೆ. ತಾನು ಹೊಕ್ಕ ಮನೆಯಲ್ಲಿಯೇ ಕೊನೆಯುಸಿರೆಳೆದ ಅಕ್ಕನ ಕ್ರಿಯಾಕರ್ಮಗಳನ್ನು ಸಾಂಗವಾಗಿ ನೆರವೇರಿಸಿ, ಅತ್ತತ್ತು ಸೊರಗಿದ್ದ ಕೇತಕಿಯ ಮುಂದಲೆ ನೇವರಿಸಿ, 'ಅಳಬೇಡ ಕಣೇ, ಅಳಬೇಡ ಕಣೇ...' ಎನ್ನುತ್ತಾ ತಾನೂ ಅವಳ ಜೊತೆ ಬಿಕ್ಕಳಿಸಿ, ಬದುಕು ಎಲ್ಲವನ್ನೂ ಕ್ರಮೇಣ ಹಿನ್ನೆಲೆಗೆ ಸರಿಸುತ್ತಾ, ನೆನಪಿಸಿಕೊಂಡಾಗಲೊಮ್ಮೆ ಒಂದು ನಿಟ್ಟುಸಿರಾಗುವಷ್ಟಕ್ಕೆ ಸೀಮಿತಳಾಗಿಬಿಟ್ಟಳು ನರ್ಮದಕ್ಕ. ಗೋಡೆಯ ಮೇಲಿನ ಪಟವಾಗಿಬಿಟ್ಟಳು.

★★★

ಕೇತಕಿಯ ಮೇಲೆ ಶ್ರಾವಂತಿಗೆ ಮತ್ಸರವೆಂಬುದೇನಾದರೂ ಇದ್ದರೆ ಅದು ತನ್ನ ನಕುಲ ಅವಳನ್ನು ಅಪಾರವಾಗಿ ಪ್ರೀತಿಸುತ್ತಾನೆ ಅನ್ನುವುದೊಂದೇ. ಈ ಪ್ರೀತಿ ತನಗೆ ಮಾತ್ರಾ ಸೀಮಿತವಾಗಿರಬೇಕು ಎನ್ನುವುದೂ ಕೂಡಾ ಸ್ವಾರ್ಥವಾಗಬಹುದು ಎನ್ನುವ ಅರಿವು ಇಲ್ಲದಷ್ಟು ಅವಳು ದಡ್ಡಿಯೇನಲ್ಲ. ಆದರೆ ಮನವೆಂಬ ಮರ್ಕಟ ಕೆಲವೊಮ್ಮೆ ಅವಳ ಭಾವನೆಗಳನ್ನು ಕೆಣಕಿ ಅವಳ ನಾಲಿಗೆಯನ್ನು ಹರಿತವಾಗಿಸಿಬಿಡುತ್ತಿತ್ತು. ಕೇತಕಿ ಮಾಡುವ ಪ್ರತಿಯೊಂದು ಕೆಲಸವೂ ನಕುಲನಿಗೆ ಅಚ್ಚುಮೆಚ್ಚು ಎನ್ನುವ ಸತ್ಯ ಅವಳಿಗೆ ಗೊತ್ತಿದೆ. ಮುಂಜಾನೆ ಬೇಗ ಎದ್ದು ಮನೆಯೆದುರಿನ ಅಂಗಳಕ್ಕೆ ನೀರು ತಳೆದು ರಂಗವಲ್ಲಿ ಬಿಡಿಸುವುದು, ಕೈದೋಟದಿಂದ ಬುಟ್ಟಿ ತುಂಬಾ ಹೂಗಳನ್ನು ಕೊಯ್ದು ತಂದಿಡುವುದು, ದೂಳು ಮುಸುಕಿದ ದೇವರ ಮಂಟಪವನ್ನು ಮಾತ್ರವಲ್ಲ, ಅದರಲ್ಲಿರುವ ದೇವರುಗಳನ್ನೆಲ್ಲಾ ಥಳಥಳ ಹೊಳೆಯುವಂತೆ ತಿಕ್ಕಿ ಶುಭ್ರ ಮಾಡುವುದು, ನಕುಲ ಸ್ನಾನ ಮುಗಿಸಿ ಬರುವಷ್ಟರಲ್ಲಿ ದೇವರೆದುರು ದೀಪ. ಮಂಟಪದೆದುರು ರಂಗವಲ್ಲಿ. ದೇವರ ನೈವೇದ್ಯಕ್ಕೆಂದು ಲೋಟದಲ್ಲಿ ತಂದಿಡುತ್ತಿದ್ದ ಹಾಲು. ನಕುಲನೂ ಕಳ್ಳನೇ. ಯಾವಾಗಿನ ಹಾಗಲ್ಲದೆ ಕೇತಕಿ ಬಂದಿರುವಾಗ ಅವನ ಪೂಜೆಗೆ ಭಕ್ತಿಯ ಠಸ್ಸೆ ಹೊಡೆದಂತೆ ಕಾಣುವುದಕ್ಕೆ ತನ್ನ ದೃಷ್ಟಿದೋಷವೂ ಕಾರಣವಿರಬಹುದು ಎಂದುಕೊಳ್ಳುತ್ತಾಳೆ ಶ್ರಾವಂತಿ. ಆದರೆ ಅವನ ಪೂಜೆಯಲ್ಲಿ ವಿಶೇಷವಾದಂತಾದ್ದೇನೋ ಕಾಣುವುದು ಸತ್ಯ. ಪೂಜೆ ಮುಗಿಯುತ್ತಿದ್ದಂತೆ ಡೈನಿಂಗ್ ಟೇಬಲ್ಲಿನ ಮೇಲೆ ಹೊಗೆಯಾಡುವ ತಿಂಡಿ. ಅದೂ ನಕುಲನಿಗೆ ಪ್ರಿಯವಾದಂತಾದ್ದು. ದೋಸೆಯಂತಾ ಸಾದಾ ತಿಂಡಿಯೇ ಇರಲಿ, ತಿನ್ನುತಿನ್ನುತ್ತಿದ್ದಂತೆ ಒಂದೊಂದನ್ನೇ ಮಾಡಿ ಹಾಕುವ ತಾಳ್ಮೆ, ಪುರುಸೊತ್ತು ಶ್ರಾವಂತಿಗೆಲ್ಲಿರುತ್ತಿತ್ತು? ದೋಸೆಗೆ ಚಟ್ನಿ ಮುಗಿದರೆ, ಅಂಗಡಿಯಿಂದ ಕೊಂಡು ತಂದ ಚಟ್ನಿಪುಡಿಯಲ್ಲಿ 'ಆಯ್ತು' ಅನಿಸುತ್ತಿದ್ದ ದಿನಗಳೂ ಇದ್ದುವು. ಬೆಲ್ಲ, ತುಪ್ಪ ಕೂಡಾ ಚಿಕ್ಕಂದಿನ ಅಭ್ಯಾಸಬಲದಿಂದ ನಕುಲನ ನಾಲಿಗೆಗೆ ಬಹುವಾಗಿ ಸೊಗಸುತ್ತಿದ್ದುದು ಶ್ರಾವಂತಿಯ ಪಾಲಿಗೆ ವರವಾಗಿತ್ತು. ಇಡ್ಲಿ, ದೋಸೆ, ರೊಟ್ಟಿ ಎಲ್ಲದಕ್ಕೂ ಬೆಲ್ಲ. 'ಗೊದ್ದ' ಅನ್ನುತ್ತಿದ್ದಳು ಶ್ರಾವಂತಿ. ಕೇತಕಿ ಬಂದಳು ಎಂದರೆ ದೋಸೆಯ ಜೊತೆ ಆಲೂ,